ದಿನಾಂಕಃ **05-08-2023** ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ವಾದಿಯ ಪರ ವಕೀಲರಿಂದಃ-

ಸ.ನಂ. 103 ರ ಸ್ವತ್ತು ಪ್ರಸ್ತುತ ಸ.ನಂ. 103/1 ಮತ್ತು 103/2 ಎಂಬುದಾಗಿ ಎರಡು ಭಾಗ ಆಗಿದೆ ಎಂದರೆ ಸರಿ. ಸ.ನಂ. 103/1 ರ ಸ್ವತ್ತು ಸ.ನಂ. 103/2 ರ ಪಶ್ಚಿಮ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ಸ.ನಂ. 103/2 ರ ಸ್ವತ್ತು ಪೂರ್ವಕ್ಕೆಃ ಜಿ. ಜನಾರ್ಧನ್ ರವರ ಸ್ವತ್ತು, ಪಶ್ಚಿಮಕ್ಕೆಃ ಎಲ್. ಚಿದಾನಂದರ ರವರ ಸ್ವತ್ತು, ಉತ್ತರಕ್ಕೆಃ ಜೀನರ ನಾಗಣ್ಣ ರವರ ಸ್ವತ್ತು , ದಕ್ಷಿಣಕ್ಕೆಃ ರಸ್ತೆ ಈ ಚೆಕ್ಕುಬಂದಿ ನಡುವೆ ಬರುತ್ತದೆ ಎಂದರೆ ಸರಿ. ಸದರಿ ಸ್ವತ್ತು ದಿಃ 12.09.1998 ರಂದು ಹೊಸಪೇಟೆ ಎ.ಸಿ. ರವರು ಮಾಡಿರುವ ಆದೇಶ ಅನ್ಯಕ್ರಾಂತ ಆಗಿರುತ್ತದೆ ಎಂದರೆ ಸರಿ. ನನ್ನ ಅಣ್ಣನ ಮರಣಕ್ಕೆ ಮೊದಲು ಮೇಲೆ ಹೇಳಿದಂತೆ 20 ನಿವೇಶನಗಳನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿ . ದಿಃ 24.06.2004 ರ ನಂತರ ಸದರಿ ನಿವೇಶನಗಳನ್ನು ಮಾರಾಟ ಮಾಡಿದ್ದೆವು ಎಂದರೆ ಸಾಕ್ಷಿಯು ನನ್ನ ಅಣ್ಣನ ಜೀವಿತಾವಧಿಯಲ್ಲಿಯೇ ಮಾರಾಟ ಮಾಡಿದ್ದೇವೆ ಎಂದು ಉತ್ತರಿಸಿದ್ದಾರೆ. ಮೇಲೆ ಹೇಳಿದಂತೆ ಮಾರಾಟವಾಗಿರುವ ನಿವೇಶನಗಳು 2009 ರಿಂದ 2011 ನೇ ಸಾಲಿನಲ್ಲಿ ಮಾರಾಟ ಆಗಿವೆ ಎಂದರೆ ನಿಖರ ದಿನಾಂಕ ನೆನಪಿಲ್ಲ, ಇರಬಹುದು ಎಂದು ಸಾಕ್ಷಿ ಹೇಳಿದ್ದಾರೆ.

ಪ್ಲಾಟ ನಂ. 45 ನ್ನು ದಿಃ 24.06.2004 ರಂದು ನನ್ನ ತಾಯಿ ಮಾಬುಸಾಬ ಬೆಟಗೇರಿ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ.

ಪ್ಲಾಟ ನಂ. 60 ನ್ನು ದಿಃ 31.03.2009 ರಂದು ನನ್ನ ಸಹೋದರ ವೀರಣ್ಣ ಮತ್ತು ನಾನು ಹಾಗೂ ಪ್ರತಿವಾದಿ ಸಂಃ 2 ಮತ್ತು 3 ರವರು ಸೇರಿ ಈಳಿಗರ ಬಸವಣ್ಣೆವ್ವ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ.

ಪ್ಲಾಟ ನಂ. 59 ನ್ನು ದಿಃ 31.03.2009 ರಂದು ನನ್ನ ಸಹೋದರ ವೀರಣ್ಣ ಮತ್ತು ನಾನು ಹಾಗೂ ಪ್ರತಿವಾದಿ ಸಂಃ 2 ಮತ್ತು 3 ರವರು ಸೇರಿ ಈಳಿಗರ ಲಕ್ಷ್ಮಣ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ.

ಪ್ಲಾಟ ನಂ. 61 ನ್ನು ದಿಃ 31.03.2009 ರಂದು ನನ್ನ ಸಹೋದರ ವೀರಣ್ಣ ಮತ್ತು ನಾನು ಹಾಗೂ ಪ್ರತಿವಾದಿ ಸಂಃ 2 ಮತ್ತು 3 ರವರು ಸೇರಿ ಹಲವಾಗಲ ದಾದಾಖಲಂದರ್ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ.

ಪ್ಲಾಟ ನಂ. 40 ನ್ನು ದಿಃ 13.05.2009 ರಂದು ನನ್ನ ಸಹೋದರ ವೀರಣ್ಣ ಮತ್ತು ನಾನು ಹಾಗೂ ಪ್ರತಿವಾದಿ ಸಂಃ 2 ಮತ್ತು 3 ರವರು ಸೇರಿ ಅಂಕದ ಬಸವರಾಜಪ್ಪ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ.

ಪ್ಲಾಟ ನಂ. 39 ನ್ನು ದಿಃ 13.05.2009 ರಂದು ನನ್ನ ಸಹೋದರ ವೀರಣ್ಣ ಮತ್ತು ನಾನು ಹಾಗೂ ಪ್ರತಿವಾದಿ ಸಂಃ 2 ಮತ್ತು 3 ರವರು ಸೇರಿ ಕೋಟೆಯರ ಮಲ್ಲಿಕಾರ್ಜುನ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ.

ಪ್ಲಾಟ ನಂ. 55 ನ್ನು ದಿಃ 16.05.2009 ರಂದು ನನ್ನ ಸಹೋದರ ವೀರಣ್ಣ ಮತ್ತು ನಾನು ಹಾಗೂ ಪ್ರತಿವಾದಿ ಸಂಃ 2 ಮತ್ತು 3 ರವರು ಸೇರಿ ಎಚ್. ಬಸವರಾಜ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ.

ಪ್ಲಾಟ ನಂ. 42 ಮತ್ತು 43 ನ್ನು ದಿಃ 27.06.2009 ರಂದು ನನ್ನ ಸಹೋದರ ವೀರಣ್ಣ ಮತ್ತು ನಾನು ಹಾಗೂ ಪ್ರತಿವಾದಿ ಸಂಃ 2 ಮತ್ತು 3 ರವರು ಸೇರಿ ಅರ್ಜಿ ಸುಭಾನಸಾಬ್ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ.

ಪ್ಲಾಟ ನಂ. 58 ನ್ನು ದಿಃ 11.08.2010 ರಂದು ನನ್ನ ಸಹೋದರ ವೀರಣ್ಣ ಮತ್ತು ನಾನು ಹಾಗೂ ಪ್ರತಿವಾದಿ ಸಂಃ 2 ಮತ್ತು 3 ರವರು ಸೇರಿ ವಿಶ್ವನಾಥ ಮತ್ತು ಪ್ರಭು ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ.

ಪ್ಲಾಟ ನಂ. 22 ಮತ್ತು 23 ನ್ನು ನನ್ನ ಸಹೋದರ ವೀರಣ್ಣ ಮತ್ತು ನಾನು ಹಾಗೂ ಪ್ರತಿವಾದಿ ಸಂಃ 2 ಮತ್ತು 3 ರವರು ಸೇರಿ ಕರಿಬಸಪ್ಪ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ.

ಪ್ಲಾಟ ನಂ. 57 ನ್ನು ನನ್ನ ಸಹೋದರ ವೀರಣ್ಣ ಮತ್ತು ನಾನು ಹಾಗೂ ಪ್ರತಿವಾದಿ ಸಂಃ 2 ಮತ್ತು 3 ರವರು ಸೇರಿ ಕೊರವರ ಮಾರುತಿ ಮತ್ತು ಕೊರವರ ಯಮನೂರ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ.

ಪ್ಲಾಟ ನಂ. 21 ನ್ನು ನನ್ನ ಸಹೋದರ ವೀರಣ್ಣ ಮತ್ತು ನಾನು ಹಾಗೂ ಪ್ರತಿವಾದಿ ಸಂಃ 2 ಮತ್ತು 3 ರವರು ಸೇರಿ ಎಳೂರು ಗುರುವಪ್ಪ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ.

ಪ್ಲಾಟ ನಂ. 19 ನ್ನು ನನ್ನ ಸಹೋದರ ವೀರಣ್ಣ ಮತ್ತು ನಾನು ಹಾಗೂ ಪ್ರತಿವಾದಿ ಸಂಃ 2 ಮತ್ತು 3 ರವರು ಸೇರಿ ಮಸೂತಿ ಸಲೀಮಾಬೇಗಂ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ.

ಸದರಿ ಮೇಲೆ ಹೇಳಿದ ಕ್ರಯ ಪತ್ರಗಳಿಗೆ ನನ್ನ ಅಣ್ಣ ಎ. ವೀರಪ್ಪ ಎಂಬುದಾಗಿ ಸಹಿ ಮಾಡಿದ್ದಾರೆ. ನನ್ನ ಅಣ್ಣ ಯಾವಾಗಲು ಎ.ವೀರಪ್ಪ ಎಂಬುದಾಗಿ ಸಹಿ ಮಾಡಿತ್ತಾರೆ ಎಂದರೆ ಸರಿ.

ಮೇಲೆ ಹೇಳಿದ ನಿವೇಶನಗಳನ್ನು ಯಾವ ಕಾರಣಕ್ಕೆ ಮಾರಾಟ ಮಾಡಿದ್ದೀರಿ ಎಂದರೆ ಸಾಕ್ಷಿಯು ನನ್ನ ತಾಯಿಯ ಅನಾರೋಗ್ಯ ಸಂಬಂಧ ಸಾಲ ಮಾಡಲಾಗಿತ್ತು, ಆ ಕಾರಣ ನನ್ನ ಅಣ್ಣನ ವಿವಾಹದ ಸಂಬಂಧ ಹಾಗೂ ಅವರ ಅನಾರೋಗ್ಯದ ಸಂಬಂಧ ಹಾಗೂ ನನ್ನ ಸಹೋದರಿಯರ ವಿವಾಹದ ಸಂಬಂಧ ಹಣದ ಅವಶ್ಯಕತೆ ಇತ್ತು ಆ ಕಾರಣ ಮಾರಾಟ ಮಾಡಿದ್ದೇವೆ ಎಂದು ತಿಳಿಸಿದ್ದಾರೆ. ನನ್ನ ಅಣ್ಣನ ವಿವಾಹ ಹಿರೇಹಡಗಲಿಯಲ್ಲಿ ನಡೆದಿದೆದ. ಹಿರೇಹಡಗಲಿ

ಸಾವಿತ್ರಮ್ಮರವರ ತವರು ಮನೆ ಎಂದರೆ ಸರಿ. ನನ್ನ ಅಣ್ಣನ ವಿವಾಹದ ಸಮಯ 2 ನೇ ವಾದಿಯ ಮನೆಯವರು ಸುಮಾರು 12 ತೊಲ ಬಂಗಾರ ನೀಡಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಕೇವಲ ಒಂದೂವರೆ ತೊಲ ನೀಡಿದ್ದಾರೆ ಎಂದು ತಿಳಿಸಿದ್ದಾರೆ. ಆಕೆಯ ಪೋಷಕರು ವಿವಾಹದ ಸಮಯ ಒಂದು ಗಾಡ್ರೇಜ್ ಗಾಡ್ರೇಜ್ ಕಬ್ಬಿಣದ ಮಂಚ, ಒಂದು ಗಾಡ್ರೇಜ್ ಅಲ್ಮೇರಾ ಮತ್ತು ಪಾತ್ರೆ ಸಾಮುಗ್ರಿಗಳನ್ನು ನೀಡಿದ್ದರು ಎಂದರೆ ಸಾಕ್ಷಿಯು ಗಾಡ್ರೇಜ್ ಕಬ್ಬಿಣದ ಮಂಚ ನೀಡಿಲ್ಲ, ಉಳಿದ ಸಾಮುಗ್ರಿಗಳನ್ನು ನೀಡಿಲ್ಲ, ಉಳಿದ ಸಾಮುಗ್ರಿಗಳನ್ನು ಹಾಗೆಯೇ ಕಟ್ಟಿ ಇಟ್ಟಿದ್ದೇವೆ ಎಂದು ತಿಳಿಸಿದ್ದಾರೆ. 12 ತೊಲ ಬಂಗಾರ ನೀಡಿದ್ದರೂ ಸಹ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ

ಹೇಳಿದಂತೆ ಮಾರಾಟ ಮಾಡಿರುವ ಸ್ವತ್ತುಗಳು ಹೂವಿನಹಡಗಲಿ ಪುರಸಭೆಯ ವಾಪ್ತಿಗೆ ಹೊಂದಿಕೊಂಡಂತೆ ಇರುವ ಆಸ್ತಿಗಳು ಎಂದರೆ ಸರಿ. ಸ.ನಂ. 103ರ ಸ್ವತ್ತು ಅನ್ಯಕ್ರಾಂತ ಮಾಡಿಸುವ ಮೊದಲು ಸದರಿ ಸ್ವತ್ತಿನ ಸುತ್ತಮುತ್ತಲು ಮನೆಗಳನ್ನು ನಿರ್ಮಿಸಲಾಗಿತ್ತು ಎಂದರೆ ಸಾಕ್ಷಿಯು ದಕ್ಷಿಣ ದಿಕ್ಕಿನಲ್ಲಿ ಕೆಲವು ಮನೆಗಳನ್ನು ನಿರ್ಮಿಸಲಾಗಿತ್ತು ಎಂದು ತಿಳಿಸಿದ್ದಾರೆ. ನಮ್ಮ ನಿವೇಶನಗಳು ಹೂವಿನಹಡಗಲಿಯ ಸಂತೆ ಮಾರುಕಟ್ಟೆಯಿಂದ ಮತ್ತು ಪುರಸಭೆಯಿಂದ 3 ಕಿ.ಮೀ. ಅಂತರದಲ್ಲಿದೆ ಎಂದರೆ ಸರಿ. 2004 ನೇ ಸಾಲಿನಲ್ಲಿ 30 x 40 ವಿಸ್ತೀರ್ಣದ ಒಂದು ನಿವೇಶನದ ಬೆಲೆ ಸುಮಾರು 4 ರಿಂದ 5 ಲಕ್ಷ ರೂ. ಇತ್ತು ಎಂದರೆ ನನಗೆ ನಿಖರವಾಗಿ ತಿಳಿದಿಲ್ಲ ಎಂದು ಸಾಕ್ಷಿ ತಿಳಿಸಿದ್ದಾರೆ.

ನನ್ನ ತಾಯಿ ಯಾರ ಯಾರ ಬಳಿ ಎಷ್ಟು ಸಾಲ ತೆಗೆದುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣ ಯಾರು ಯಾರಿಗೆ ಸಾಲ ಹಿಂತಿರುಗಿಸಿದ್ದಾರೆ ಎಂದು ನನಗೆ ನೆನಪಿಲ್ಲ.

ನ್ಯಾಯಾಲಯದ ಬೆಳಗಿನ ಕಲಾಪದ ಅವಧಿ ಮುಗಿದ ಕಾರಣ ಮಧ್ಯಾಹ್ನ 2.45 ಗಂಟೆಗೆ ಮುಂದುವರೆದ ಪಾಟೀಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೂವಿನ ಹಡಗಲಿ.

ನ್ಯಾಯಾಲಯದ ಮಧ್ಯಾಹ್ನದ ಕಲಾಪದಲ್ಲಿ ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ವಾದಿಯ ಪರ ವಕೀಲರಿಂದಃ-

ನನ್ನ ತಾಯಿ ಅವಿದ್ಯಾವಂತಳಾಗಿದ್ದಳು ಎಂದರೆ ಸರಿ. ನನ್ನ ತಾಯಿಯ ಜೀವಿತಾವಧಿಯಲ್ಲಿ ಯಾವುದೇ ಸಾಲಗಾರರು ಮನೆಯ ಬಳಿ ಬಂದು ಸಾಲ ಹಿಂತಿರುಗಿಸುವಂತೆ ಅವರನ್ನು ಕೇಳಿಲ್ಲ ಎಂದರೆ ಸಾಕ್ಷಿಯು ಬರುತ್ತಿದ್ದರು, ನನ್ನ ತಾಯಿ ನಂತರ ನೀಡುತ್ತೇವೆಂದು ಹೇಳಿ ಕಳುಹಿಸುತ್ತಿದ್ದರು ಎಂದು ಹೇಳಿದ್ದಾರೆ. ಸಾಕ್ಷಿಯು ಸ್ವತಃ ಮುಂದುವರೆದು ನಾವು ಶಾಲೆಗೆ ಹೋಗುತ್ತಿದ್ದೆವು ಸಾಲಗಾರರರು ಬರುತ್ತದ್ದರೋ ಇಲ್ಲವೋ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅಣ್ಣ ರಾಜಕಾರಣಿಗಳ ಜೊತೆ ಹೆಚ್ಚು ಓಡಾಡುತ್ತಿದ್ದರು ಎಂದರೆ ಸರಿ. ನನ್ನ ತಾಯಿಗೆ ನನ್ನ ಅಣ್ಣ, ತಮ್ಮ, ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದನಿಲ್ಲವೇ ಎಂಬ ಕೊರವು ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣ ವಿವಾಹವಾದ ನಂತರ 5 ವರ್ಷಗಳವರೆಗೆ ಮಾತ್ರ ಜೀವಂತ ಇದ್ದ ಎಂದರೆ ಸರಿ. ಮೇಲೆ ಹೇಳಿದ ನಿವೇಶನಗಳು ಮಾರಾಟವಾದ ವಿಚಾರ 2 ನೇ ವಾದಿಗೆ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ಅಣ್ಣನಿಗೆ ಮರಣ ಶಾಸನ ಬರೆಯಲು ಕಾರಣ ಏನಿತ್ತು ಎಂದರೆ ಸಾಕ್ಷಿಯು ಆತನ ಪತ್ನಿ ಆತನನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ, ಮುಂದೆ ಯಾರು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎನ್ನುವ ಆತಂಕ ಇತ್ತು, ಸಹೋದರಿಯರ ವಿವಾಹವು ಸಹ ಆಗಿರಲಿಲ್ಲ, ಆದ್ದುರಿಂದ ಮರಣ ಶಾಸನ ಬರೆದಿದ್ದಾರೆ ಎಂದು ತಿಳಿಸಿದ್ದಾರೆ. ಮರಣ ಶಾಸನ ಬರೆಯುವ ಸಮಯ ನಮ್ಮ ಕುಟುಂಬದ ಸ್ವತ್ತುಗಳನ್ನು ನಾವು ವಿಭಾಗಿಸಿಕೊಂಡಿರಲಿಲ್ಲ. ವಿಭಾಗ ನಡೆದರೆ ಯಾವ ಸ್ವತ್ತುಗಳು ತನಗೆ ಬರಬಹುದು ಎಂಬ ವಿಚಾರ ನನ್ನ ಅಣ್ಣನಿಗೆ ತಿಳಿದಿರಲಿಲ್ಲ ಎಂದರೆ ಸರಿ. ಮರಣ ಶಾಸನಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುವ ಪಿ. ವೀರಪ್ಪ ನನ್ನ ಗಂಡ. ಮತ್ತೊಬ್ಬ ಸಾಕ್ಷಿದಾರರಾದ ಯು.ಎಂ. ವೀರಯ್ಯ ರವರು ನನ್ನ ಗಂಡನಿಗೆ ಪರಿಚಿತರು. ಮರಣ ಶಾಸನದ ಎಲ್ಲಾ ವಿವರಗಳನ್ನು ನನ್ನ ಗಂಡನೇ ತಿಳಿಸಿದ್ದಾರೆ, ಅದನ್ನು ತಯಾರಿಸುವ ಎಲ್ಲಾ ಮುತರ್ಜಿ ವಹಿಸಿದ್ದಾರೆ ಎಂದರೆ ಸರಿಯಲ್ಲ. ಮರಣ ಶಾಸನ ಬರೆದ ನಂತರ ನನ್ನ ಅಣ್ಣ ನನ್ನ ಗಂಡನಿಗೆ ದೂರವಾಣಿ ಕರೆಮಾಡಿ ಕರೆಯಿಸಿಕೊಂಡು ಮರಣ ಶಾಸನಕ್ಕೆ ಸಹಿ ಮಾಡಿಸಿಕೊಂಡಿದ್ದಾರೆ. ಯು.ಎಂ.ವೀರಯ್ಯ ಮೊದಲೇ ಹೋಗಿರಬಹುದು ನನಗೆ ಗೊತ್ತಿಲ್ಲ. ಮರಣ ಶಾಸನದಲ್ಲಿ ವೀರಣ್ಣ ಎಂಬುದಾಗಿ ಸಹಿ ಮಾಡಲಾಗಿದೆ. ಸಾಕ್ಷಿಯು ಮುಂದುವರೆದು ಮರಣ ಶಾಸನ ಬರೆಯುವ ಸಂದರ್ಭದಲ್ಲಿ ಆರೋಗ್ಯವು ಸರಿ ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯ ನನ್ನ ಅಣ್ಣನಿಗೆ ಏನೇನು ನಡೆಯುತ್ತಿತ್ತು ಎನ್ನುವ ಚೈತನ್ಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಆ ಸಮಯದಲ್ಲಿ ಹೃದಯ ಸಂಬಂಧಿ ಕಾಯಿಲೆ ಇತ್ತು.

ಮರಣ ಶಾಸನ ಬರೆಯುುವ ದಿನಾಂಕಕ್ಕೆ ಸ.ನಂ. 103 ರ ಸ್ವತ್ತು ಪ್ಲಾಟಗಳಾಗಿ ಪರಿವರ್ತನೆ ಆಗಿದ್ದವು ಎಂದರೆ ಸರಿ. ಸದರಿ ದಿನಾಂಕಕ್ಕೆ ಈ ಮೇಲೆ ಹೇಳಿದಂತೆ ನಾನು, ನನ್ನ ಅಣ್ಣ ಮತ್ತು ಸಹೋದರಿಯರು ಕೆಲವು ನಿವೇಶನಗಳನ್ನು ಮಾರಾಟ ಮಾಡಿದ್ದೆವು ಎನ್ನುವುದು ಸರಿ. ಮರಣ ಶಾಸನದ 2 ನೇ ಪುಟದಲ್ಲಿ ನಮೂದಿಸಿರುವ ಪ್ಲಾಟಗಳ ನಂಬರುಗಳು ಎಷ್ಟು ಎಂದು ಹೇಳಲಾಗುವುದಿಲ್ಲ. ಮರಣ ಶಾಸನದಲ್ಲಿ ತೋರಿಸಲಾಗಿರುವ ಮನೆ ಸಂಃ 133 ರ ಪ್ರಸ್ತುತ 2 ಮನೆಗಳನ್ನು ಹೊಂದಿದೆ. ವೀರಣ್ಣ ರವರು ಮರಣ ಶಾಸನ ಬರೆದಿಲ್ಲ, ನಾನು ಮತ್ತು ನನ್ನ ಗಂಡ ಸೇರಿ ಮರಣ ಶಾಸನವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ದಾವಾ ಬಿ ಶೆಡ್ಯೂಲ್ 2 ನೇ ಸ್ವತ್ತು ನನ್ನ ಪಿತ್ರಾರ್ಜಿತ ಸ್ವತ್ತು ಎನ್ನುವುದು ಸರಿ. ದಾವಾ ಬಿ ಶೆಡ್ಯೂಲ್ 3 ನೇ ಸ್ವತ್ತನ್ನು 2016 ನೇ ಸಾಲಿನಲ್ಲಿ ಖರೀದಿಸಿದ್ದೇವೆ ಎನ್ನುವುದು ಸರಿ. ದಾವಾ ಶೆಡ್ಯೂಲ್ 3 ನೇ ಸ್ವತ್ತು ಖರೀದಿಸಿದ 3 ದಿನಗಳ ನಂತರ ಮರಣ ಶಾಸನ ಬರೆಯಲಾಗಿದೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ. ದಾವಾ ಶೆಡ್ಯೂಲ್ 3 ನೇ ಸ್ವತ್ತಿನ ಖರೀದಿಯ ಮತ್ತು ಮರಣ ಶಾಸನದ ದಿನಾಂಕದಿಂದ 3 ತಿಂಗಳ ನಂತರ ನಮ್ಮ ಅಣ್ಣ ಮರಣ ಹೊಂದಿದ್ದಾನೆ ಎನ್ನುವುದು ಸರಿ. ನನ್ನ ಅಣ್ಣ ದಿನಾಂಕಃ 05.09.2016 ರಂದು ಮರಣ ಹೊಂದಿದ್ದಾರೆ ಎನ್ನುವುದು ಸರಿ. ನಿಡಿ-1 ಕ್ರಯ ಪತ್ರದಲ್ಲಿ ಯಾವ ಮೂಲದ ಆದಾಯದಿಂದ ಸ್ವತ್ತನ್ನು ಖರೀದಿಸಿದ್ದೇನೆ ಎನ್ನುವುದಾಗಿ ನಮೂದಿಸಿಲ್ಲ ಎನ್ನುವುದು ಸರಿ. ನಿಡಿ-1 ರಲ್ಲಿ ತೋರಿಸಿರುವ ಸ್ವತ್ತಿನ ಮಾರಾಟಗಾರರು ಇನ್ನೂ ಜೀವಂತ ಇದ್ದಾರೆ. ಮೇಲೆ ಹೇಳಿದಂತೆ ಪ್ಲಾಟಗಳನ್ನು ಮಾರಾಟ ಮಾಡಿ, ಬಂದ ಹಣದಿಂದ ದಾವಾ ಬಿ ಶೆಡ್ಯೂಲ್ 3 ನೇ ಸ್ವತ್ತನ್ನು ಖರೀದಿಸಿದ್ದೇವೆ ಎಂದರೆ ಸರಿಯಲ್ಲ.

ನನ್ನ ತಾಯಿ ಗೌರಮ್ಮ ಮಲ್ಲಪ್ಪರವರ ಮಗಳು ಎಂದರೆ ಸರಿ. 1953 ನೇ ಸಾಲಿನಲ್ಲಿ ನನ್ನ ತಾಯಿಯ ಚಿಕ್ಕಪ್ಪ ದಾವೆಯೊಂದನ್ನು ಸಲ್ಲಿಸಿ ದಾವೆ ಡಿ ಶೆಡ್ಯೂಲ್ ಸ್ವತ್ತುಗಳನ್ನು ಆಕೆಗೆ ವಹಿಸಿಕೊಟ್ಟಿದ್ದರು ಎಂದರೆ ಸರಿ. ದಾವಾ ಡಿ ಶೆಡ್ಯೂಲ್ ಸ್ವತ್ತುಗಳು ಇಂದಿಗೂ ಅಸ್ತಿತ್ವದಲ್ಲಿವೆ ಎಂದರೆ ಸರಿ. ದಾವಾ ಡಿ ಶೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಮೂಲ ದಾಖಲೆಗಳು ನನ್ನ ಮತ್ತು ನನ್ನ ಸಹೋದರಿಯರ ಬಳಿ ಇರುತ್ತವೆ ಎಂದರೆ ಸರಿ. ನನ್ನ ತಾಯಿ ಮತ್ತು ನನ್ನ ಅಣ್ಣ ಮಾಡಿದ್ದ ಸಾಲದ ದಾಖಲಾತಿಗಳೂ ಸಹ ನನ್ನ ಬಳಿ ಇವೆ ಎಂದರೆ ನಮಗೆ ಗೊತ್ತಿಲ್ಲ, ಅವರು ನಮಗೆ ಏನು ಹೇಳಿಲ್ಲ ಎಂದು ತಿಳಿಸಿದ್ದಾರೆ. ದಾವಾ ಡಿ ಸ್ವತ್ತುಗಳಿಗೆ ಸಂಬಂಧಿಸಿ ನನ್ನ ತಾಯಿ ಮರಣ ಶಾಸನ ಬರೆದು ಸಂಬಂಧಿಕರ ಮನೆಯಲ್ಲಿಟ್ಟಿದ್ದಾರೆಂದು ನನ್ನ ಕುಟುಂಬದಲ್ಲಿ ಅನುಮಾನಾಸ್ಪದ ಮಾತುಕತೆ ನಡೆಯುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ನನ್ನ ಅಣ್ಣ ತನ್ನ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವುದಿಲ್ಲ ಎನ್ನುವ ಕೊರಗು ಇದ್ದ ಕಾರಣ ಮೊಮ್ಮಕ್ಕಳ ಭವಿಷ್ಯಕ್ಕಾಗಿ ಸ.ನಂ. 103 ರ ಸ್ವತ್ತು ಅನ್ಯಕ್ರಾಂತ ಆದೇಶವಾದ ನಂತರ ಸದರಿ ಸ್ವತ್ತಿಗೆ ಸಂಬಂಧಿಸಿ ಮರಣ ಶಾಸನ ಬರೆದಿದ್ದಾರೆ,

ನನಗೆ ಆ ವಿಚಾರ ತಿಳಿದಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳು ನನ್ನ ಸಹೋದರಿ ಪುಷ್ಪಾರವರ ವಶದಲ್ಲಿವೆ ಎಂದರೆ ಸರಿ. ನಮ್ಮ ಮನೆತನದ ಕೊಡು-ಕೊಳ್ಳುವ ವ್ಯಾಪಾರದ ಬಗ್ಗೆ ನನಗಿಂತಲೂ ಹೆಚ್ಚಿನ ಮಾಹಿತಿ ನನ್ನ ಸಹೋದರಿ ಪುಷ್ಪಾರವರಿಗೆ ಮಾಹಿತಿ ಇದೆ ಎಂದರೆ ಸರಿ. ಪುಷ್ಪಾ ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ತಿಳಿಯುತ್ತದೆ ಎಂದು ನನ್ನನ್ನು ಸಾಕ್ಷಿಯಾಗಿ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ.

ನನ್ನ ಅಣ್ಣನ ಮರಣಾ ನಂತರ 2 ನೇ ವಾದಿ ತನ್ನ ಮಗನೊಡನೆ, ನಮ್ಮೊಡನೆ ಇರಲಾರೆ ಎಂದು ಹಿರೇಹಡಗಲಿಗೆ ವಾಸಕ್ಕೆ ಹೋದನು ಎಂದರೆ ಸರಿ. 2 ನೇ ವಾದಿಗೆ ನಿಮ್ಮ ಭಾಗಕ್ಕೆ ಬರುವ ಸ್ವತ್ತು ತೆಗೆದುಕೊಂಡು ಹೋಗಿ ಎಂದು ನಾವು ಹೇಳಿಲ್ಲ ಎಂದರೆ ಸರಿಯಲ್ಲ. ವಿವಾಹವಾದ ನಂತರ 2 ನೇ ವಾದಿ ಮತ್ತು ನನ್ನ ಸಹೋದರಿಯರಾದ 2 ಮತ್ತು 3 ನೇ ಪ್ರತಿವಾದಿಗಳ ನಡುವೆ ಮನಸ್ತಾಪವಿತ್ತು ಎಂದರೆ ಸರಿಯಲ್ಲ. ನನ್ನ ಅಣ್ಣನ ಮರಣಾ ನಂತರ ನಾವುಗಳು ವಾದಿಗಳನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ಅವರು ಸ್ವತ್ತುಗಳಲ್ಲಿ ಭಾಗಾಂಶ ಬೇಕೆಂದು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾಯಿಯ ಮನೆಯ ಎದುರು ಮನೆಯಲ್ಲಿ ವಾಸವಿರು ಪರಶೆಟ್ಟಿ ಕೇಶಪ್ಪ ಮತ್ತು ನನ್ನ ಮನೆಯವರು ಅನ್ಯೋನ್ಯವಾಗಿದ್ದರು. ನನ್ನ ತಾಯಿಯ ಜೀವಿತಾವಧಿಯಲ್ಲಿ ನಮ್ಮ ಮನೆತನದ ಬಗ್ಗೆ ಎಲ್ಲಾ ವಿಚಾರಗಳು ತಿಳಿದಿವೆ ಎಂದರೆ ಸರಿ. ಗಡಿಗಿ ನಾಗರಾಜ ತಂದೆ ಕೊಟ್ರಪ್ಪರವರಿಗೂ ಸಹ ನಮ್ಮ ಮನೆತನದ ಬಗ್ಗೆ ಎಲ್ಲಾ ವಿಚಾರಗಳು ತಿಳಿದಿವೆ ಎಂದರೆ ಸರಿ. ನನ್ನ ತಾಯಿ ಅವಿದ್ಯಾವಂತಳಾಗಿದ್ದರು ಆಕೆಗೆ ಕುಟುಂಬದ ಭವಿಷ್ಯದ ಬಗ್ಗೆ ಮುಂದಾಲೋಚನೆ ಇತ್ತು ಎಂದರೆ ಸರಿ. ದಾವಾ ಬಿ ಶೆಡ್ಯೂಲ್ 3 ನೇ ಸ್ವತ್ತಿನಲ್ಲಿ ವಾದಿಗಳಿಗೆ ಭಾಗಾಂಶ ನೀಡಬೇಕಾಗುತ್ತದೆ ಎನ್ನುವ ಕಾರಣಕ್ಕೆ ನನ್ನ ಗಂಡನ ಆದಾಯದಿಂದ ಅದನ್ನು ಖರೀದಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಹೂವಿನ ಹಡಗಲಿ.**